2 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ

ಸಿ ಸಿ ನಂ.715/2023

| ಪಿರ್ಯಾದಿದಾರರು: | ವಿರುದ್ಧ | ಆರೋಪಿತರು |
|---|---|---|
| ಸರ್ಕಾರದ ಪರವಾಗಿ<br>ಮಲೆಬೆನ್ನೂರು ಪೋಲೀಸ್ ಠಾಣೆ | | ಬಿ.ಎಂ.ಸಂಗಯ್ಯ ಹಾಗೂ ಇತರರು |

## ದೋಷಾರೋಪಣೆ

ಶ್ರೀಮತಿ ವೀಣಾ ಕೋಳೆಕರ, 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ಆದ ನಾನು ನಿಮ್ಮ ಮೇಲೆ ಅಂದರೆ:

1. ಬಿ.ಎಂ.ಸಂಗಯ್ಯ ತಂದೆ ಲೇಟ್ ಶೇಖರಯ್ಯ, 60 ವರ್ಷ,
2. ಈರಮ್ಮ ಬಿ.ಎಂ ತಂದೆ ಲೇಟ್ ಸಂಗಯ್ಯ, 47 ವರ್ಷ,
3. ಮಲ್ಲಿಕಾರ್ಜುನ ಸ್ವಾಮಿ ಯಾನೆ ಮಲ್ಲಿಕಾರ್ಜುನಯ್ಯ
   ತಂದೆ ಲೇಟ್ ಸಂಗಯ್ಯ, 31 ವರ್ಷ,
   ಎಲ್ಲರ ವಾಸ: ಇರಿಗೇಷನ್ ಕ್ವಾಟ್ರರ್ಸ್ , ಮಲೆಬೆನ್ನೂರು ಪಟ್ಟಣ,
   ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ.

ಹೊರಿಸುವ ಆರೋಪಣೆ ಏನೆಂದರೆ:

ದಿನಾಂಕ: 25.10.2021 ರಂದು ರಾತ್ರಿ 09.30 ಗಂಟೆ ಸಮಯದಲ್ಲಿ ಮಲೇಬೆನ್ನೂರು ಪೊಲೀಸ್ ಠಾಣಾ ಸರಹದ್ದಿನ ಹರಿಹರ ತಾಲ್ಲೂಕು, ಮಲೆಬೆನ್ನೂರು ಪಟ್ಟಣದ ಕಲ್ಲೇಶ್ವರ ಬಡಾವಣೆಯ ಚಾಸಾ.1 ರವರ ಮನೆಯ ಮುಂದಿನ ರಸ್ತೆಯಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶ ಹೊಂದಿ ಚಾಸಾ.1 ಮತ್ತು 4 ರವರಿಗೆ ''ಸೂಳೇಮಕ್ಕಳಾ, ಬೋಳಿ ಮಕ್ಕಳಾ'' ಎಂದು ಅವಾಚ್ಯ ಶಬ್ಧಗಳಿಂದ ಸಾರ್ವಜನಿಕವಾಗಿ ಬೈದಾಡಿ ಅವರಿಗೆ ಅವಮಾನವಾಗುವಂತೆ ಮಾಡಿರುತ್ತೀರಿ. ಆದ್ದರಿಂದ, ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.504 ರ ಸಹ ಕಲಂ.34 ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ಮುಂದುವರೆದು, ಅದೇ ದಿನ, ಸಮಯ, ಸ್ಥಳ ಮತ್ತು ಅದೇ ಸಂದರ್ಭದಲ್ಲಿ, ಆರೋಪಿತರು ಸಮಾನ ಉದ್ದೇಶ ಹೊಂದಿ ಚಾಸಾ.1 ರವರಿಗೆ ಸಾರ್ವಜನಿಕ ಸ್ಥಳದಲ್ಲಿ ಅವರ ಮಾನಕ್ಕೆ ಧಕ್ಕೆಯಾಗುವಂತೆ ಅವರ ಬಟ್ಟೆಯನ್ನು ಹಿಡಿದು ಎಳೆದಾಡಿ ಹರಿದು ಹಾಕಿರುತ್ತೀರಿ. ಆದ್ದರಿಂದ, ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.354(ಬಿ) ರೆ/ವಿ ಕಲಂ.34 ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ಮುಂದುವರೆದು, ಅದೇ ದಿನ, ಸಮಯ, ಸ್ಥಳ ಮತ್ತು ಅದೇ ಸಂದರ್ಭದಲ್ಲಿ, ಆರೋಪಿತರು ಸಮಾನ ಉದ್ದೇಶ ಹೊಂದಿ ಕೈಗಳಿಂದ ಚಾಸಾ.4 ರವರ ಮೈಕೈಗೆ ಹೊಡೆದು ಸಾಮಾನ್ಯ ಸ್ವರೂಪ

ಗಾಯಪಡಿಸಿರುತ್ತೀರಿ. ಆದ್ದರಿಂದ, ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ.323 ರೆ/ವಿ ಕಲಂ.34 ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ಮುಂದುವರೆದು, ಅದೇ ದಿನ, ಸಮಯ, ಸ್ಥಳ, ಮತ್ತು ಅದೇ ಸಂದರ್ಭದಲ್ಲಿ, ಆರೋಪಿತರಾದ ನೀವು ಸಮಾನ ಉದ್ದೇಶ ಹೊಂದಿ, ಚಾಸಾ.1 ಮತ್ತು 4 ರವರಿಗೆ 'ನಿಮ್ಮನ್ನು ಊರಿನಲ್ಲಿ ಬದುಕಲು ಬಿಡುವುದಿಲ್ಲ' ಎಂದು ಜೀವ ಬೆದರಿಕೆ ಹಾಕಿಸಿರುತ್ತೀರಿ. ಆದ್ದರಿಂದ, ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 506 ರೆ/ವಿ ಕಲಂ.34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ಮೇಲಿನ ದೋಷಾರೋಪಣೆ ಕುರಿತು ನಿಮ್ಮ ವಿರುದ್ದ ನನ್ನ ಮುಂದೆ ವಿಚಾರಣೆ ನಡೆಸಲಾಗುತ್ತದೆ ಅಂತ ನಾನು ಈ ಮೂಲಕ ನಿರ್ದೇಶಿಸುತ್ತೇನೆ.

(ಮೇಲ್ಕಂಡ ಆಪಾದನೆಯ ಸಾರಾಂಶವನ್ನು ಆರೋಪಿತನಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿದ್ದು, ಈ ದಾಖಲೆಯು ಆತನು ನೀಡಿದ ಹೇಳಿಕೆಯ ಪೂರ್ಣವಾದ ಹಾಗೂ ಸತ್ಯವಾದ ಅಂಶಗಳನ್ನು ಒಳಗೊಂಡಿದೆ )

Sd/-

ದಿನಾಂಕಃ 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಸ್ಥಳಃ ಹರಿಹರ ಮತ್ತು ಜೆಎಮ್ಎಫ್ ಸಿ ನ್ಯಾಯಾಲಯ,ಹರಿಹರ.